653 (961) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶದ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿನ (ನಂಜುಂಡಪ್ಪ ವರದಿಯಲ್ಲಿ ಉಲ್ಲೇಖಿತ) ಆರೋಗ್ಯ ಕೇಂದ್ರಗಳ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಹಾಗಿದ್ದಲ್ಲಿ, ಎಲ್ಲಾ ಯೋಜನೆಗಳಿಗಾಗಿ ಕೈಗೊಂಡಿರುವ ತಾಲ್ಲೂಕುವಾರು ವಿನಿಯೋಗಿಸುತ್ತಿರುವ ಹಣವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಡಾ ನಂಜುಂಡಪ್ಪ ರವರ ವರದಿ ಪ್ರಕಾರ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಹೈದರಾಬಾದ್ ಕರ್ನಾಟಕದ ತಾಲ್ಲೂಕುಗಳಲ್ಲಿ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ

ಈ 39 ತಾಲ್ಲೂಕುಗಳಲ್ಲಿನ ಎಲ್ಲಾ 399 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಗಂಟೆಗಳ ನರ್ಸಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ ಈ ಕೇಂದ್ರಗಳಿಗೆ ಹೆಚ್ಚುವರಿ ಆಯುಶ್ ವೈದ್ಯರನ್ನು ನೇಮಿಸಲಾಗಿರುತ್ತದೆ ಹೈದರಾಬಾದ್ ಕರ್ನಾಟಕದ ಪ್ರದೇಶಗಳಲ್ಲಿ 16 ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಹಾಗೂ ಈ ಕೇಂದ್ರಗಳಿಗೆ ಬೇಕಾಗುವ ಅತ್ಯವಶ್ಯಕ ಉಪಕರಣ ಒದಗಿಸಲು 10 ರೂ ಕೋಟಿ ನಿಗದಿಪಡಿಸಲಾಗಿದ್ದು ಕ್ರಮ ಕೈಗೊಳ್ಳಲಾಗುತ್ತಿದೆ

NRHM ಅಡಿಯಲ್ಲಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 75,000 ರೂ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ 1 ಲಕ್ಷ ರೂ ನಿರ್ವಹಣೆಗಾಗಿ ಬಿಡುಗಡೆ ಮಾಡಲಾಗಿದೆ

54 ಎಫ್ ಆರ್ ಯು ಗಳಲ್ಲಿ ಹೆಚ್ಚುವರಿಯಾಗಿ ಒಬ್ಬ ಪ್ರಯೋಗ ಶಾಲಾ ತಂತ್ರಜ್ಞರನ್ನು ಒಬ್ಬ ಶುಶ್ರೂಷಕಿಯರನ್ನು ತೆಗೆದುಕೊಳ್ಳಲಾಗಿದೆ

ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ 399 ಪ್ರಾ.ಆ ಕೇಂದ್ರಗಳಲ್ಲಿ 24 ಗಂಟೆಗಳ ನರ್ಸಿಂಗ್ ವ್ಯವಸ್ಥೆಯನ್ನು ಕೊಡಲಾಗಿದೆ ಈ ಕೇಂದ್ರಗಳಿಗೆ ಹೆಚ್ಚುವರಿ AYUSH ವೈದ್ಯರನ್ನು ನೇಮಿಸಲಾಗಿದೆ

C ವರ್ಗದ ಜಿಲ್ಲೆಗಳಲ್ಲಿ 100 ಹೆಚ್ಚುವರಿ ವೈದ್ಯರು ಹಾಗೂ 160 ಶುಶ್ರೂಷಕಿಯರನ್ನು ನೇಮಿಸಲಾಗಿದೆ ಕಷ್ಟಕರವಾದ ರೋಗಿಗಳನ್ನು ತಜ್ಞ ವೈದ್ಯರುಗಳ ಬಳಿಗೆ ಕರೆದೊಯ್ಯಲು ಸಾಗಣೆ ವ್ಯವಸ್ಥೆಯನ್ನು ಮಾಡಲಾಗಿದೆ

ಈ ಹಿಂದೆ ಬಹುತೇಕ ಆಸ್ಪತ್ರೆಗಳಲ್ಲಿ ಮಾರ್ಗಸೂಚಿ ಪ್ರಕಾರ ಸಿಬ್ಬಂದಿ ಮಂಜೂರಾತಿ ಇದರ ಆಸ್ಪತ್ರೆಗಳಿಗೆ 1800 ಸಿಬ್ಬಂದಿಯನ್ನು ಮಂಜೂರು ಮಾಡಲಾಗಿದೆ

ಆ) ಈ ಎಲ್ಲಾ ಯೋಜನೆಗಳಿಗೆ ಒಟ್ಟು 7413 43 ಲಕ್ಷ ರೂ ಗಳನ್ನು ವಿನಿಯೋಗಿಸಲಾಗುತ್ತದೆ (ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ)

ಪ್ರಶ್ನೆ ಸಂಖ್ಯೆ961 ದಿ 08-02-2007

ಹೈದರಾಬಾದ್ ಕರ್ನಾಟಕ ಪ್ರದೇಶದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ವಿನಿಯೋಗಿಸುತ್ತಿರುವ ಹಣ

ಕ್ರ ಸಂ	ತಾಲ್ಲೂಕು	ವಿನಿಯೋಗಿಸುತ್ತಿರುವ (ಹಣ ಲಕ್ಷ ರೂ.ಗಳಲ್ಲಿ)
1	ಹಗರಿಬೊಮ್ಮನಹಳ್ಳಿ	446 86
2	ಕೂಡ್ಲಗಿ	448 62
3	ಸಂಡೂರು	279 16
4	ಸಿರಗುಪ್ಪ	447 40
5	ಜೌರಾದ್	450 27
6	ಹುಮ್ನಾಬಾದ್	450 19
7	ಭಾಲ್ಕಿ	178 50
8	ಬಸವಕಲ್ಯಾಣ	450 55
9	ಶಹಾಪುರ	454 70
10	ಅಫ್‌ಜಲ್‌ಪುರ	450 11
11	ಆಳಂದ	455 25

12	ಸುರುಪುರ	452 60
13	ಚಿತ್ತಾಪುರ	454 25
14	ಚಿಂಚೋಳಿ	451 63
15	ಕೊಪ್ಪಳ	182 32
16	ಗಂಗಾವತಿ	13 19
17	ಸಿಂಧನೂರು	278 75
18	ದೇವದುರ್ಗ	619 35
19	ಮಾನ್ವಿ	449 73
	ಒಟ್ಟು	**7413 43**

654 (469) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಿಗೆ ಪ್ರತಿ ವರ್ಷ ಖರೀದಿ ಮಾಡುವ ಔಷಧಿಗಳು ಎಷ್ಟು?

ಆ) ಔಷಧಿಯನ್ನು ಯಾವ ವಿಧಾನವನ್ನು ಅನುಸರಿಸಿ ಖರೀದಿ ಮಾಡಲಾಗುವುದು?

ಇ) ಅನೇಕ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2004–05 ನೇ ಸಾಲಿನ ದರಗುತ್ತಿಗೆ ಆದೇಶದಂತೆ ಒಟ್ಟು 228 ವಿವಿಧ ಔಷಧಿ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಪ್ರತಿ ವರ್ಷ ಖರೀದಿಸಿ, ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ

ಆ) ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಕಾಯ್ದೆ 1999 ನಿಯಮ 2000 ರನ್ವಯ ರಾಷ್ಟ್ರೀಯ ಮಟ್ಟದಲ್ಲಿ ಮೂಲ ಉತ್ಪಾದಕರಿಂದ